ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/35/2016-17. ದಿನಾಂಕ:23-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಶೆಟ್ಟಿನಾಯ್ಕ ತಂದೆ ಲೇಟ್ ರಾಮನಾಯ್ಕ<br>2)ಕಮಲ್ಯನಾಯ್ಕ ತಂದೆ ಲೇಟ್ ಭೀಮಾನಾಯ್ಕ<br>ದೂಪದಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು | 1)ಲಿಂಗನಾಯ್ಕ ತಂದೆ ಲೇಟ್ ರಾಮನಾಯ್ಕ<br>2)ರೇಡ್ಡಿನಾಯ್ಕ ತಂದೆ ಲೇಟ್ ರಾಮನಾಯ್ಕ<br>3)ಕೀಮ್ಯನಾಯ್ಕ ತಂದೆ ಲೇಟ್ ರಾಮನಾಯ್ಕ<br>4)ಬೋಜ್ಯನಾಯ್ಕ ತಂದೆ ಲೇಟ್ ರಾಮನಾಯ್ಕ<br>5)ದೇನ್ಯನಾಯ್ಕ ತಂದೆ ಲೇಟ್ ರಾಮನಾಯ್ಕ<br>6)ದಾನ್ಯನಾಯ್ಕ ತಂದೆ ಲೇಟ್ ರಾಮನಾಯ್ಕ<br>ದೂಪದಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಂಪಾಪುರ ಗ್ರಾಮದ ಸನಂ 48ಬಿ. 49/1. 50ಎ. ವಿಸ್ತೀರ್ಣ 0-48. 1-30. 0-96. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಂಪಾಪುರ ಗ್ರಾಮದ ಸನಂ 48ಬಿ. 49/1. 50ಎ. ವಿಸ್ತೀರ್ಣ 0-48. 1-30. 0-96. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ದೂಪದಹಳ್ಳಿ ತಾಂಡದ ಶೆಟ್ಟಿನಾಯ್ಕ ತಂದೆ ಲೇಟ್ ರಾಮನಾಯ್ಕ ಇವರು ದಿನಾಂಕ 11-03-2016 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಂಪಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 20-04-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ದಾಖಲೆಗಳು ತಾಳೆ ಇಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 19/2015-16. ದಿನಾಂಕ 26-05-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-07-2016 ರಿಂದ 23-08-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಂಪಾಪುರ ಗ್ರಾಮದ ಸನಂ 48ಬಿ. 49/1. 50ಎ. ವಿಸ್ತೀರ್ಣ 0-48. 1-30. 0-96. ಎಕ್ರೆ ಜಮೀನುಗಳು ನಮ್ಮ ದೊಡ್ಡಪ್ಪನ ಮಗನಾದ ಕಮಲ್ಯನಾಯ್ಕ ತಂದೆ ಭೀಮಾನಾಯ್ಕ ಇವರ ಹೆಸರಲ್ಲಿ ಲೆಕ್ಕ ದಾಖಿಲೆ ಪಟ್ಟಾ ಇರುತ್ತದೆ. ನಾವುಗಳು ದಿನಾಂಕ 11-03-2016 ರಂದು ಪಾಲು ವಿಭಾಗದ ಪತ್ರ ಬರೆಯಿಸಿರುತ್ತೇವೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಸದರಿ ಜಮೀನುಗಳು ನನ್ನ ಹಿಸ್ಯಾಕ್ಕೆ ಬಿಟ್ಟು ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಪು.ತಿ.ನೋ-2

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮಗಳ ಯಾವುದೇ ತಕರಾರು ಇಲ್ಲವೆಂದು ಖುದ್ದು ರಾಜಿಯಿಂದ ಮನ ಒಪ್ಪಿ ರಾಜಿ ಒಪ್ಪಿಗೆ ಪತ್ರವನ್ನು ಹಾಜರು ಪಡಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಪಾಲು ವಿಭಾಗದ ಪತ್ರದನ್ವಯ ಹಕ್ಕು ಬದಲಾವಣೆಗೆ ಎಲ್ಲರೂ ಒಪ್ಪಿರುವುದರಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಂಪಾಪುರ ಗ್ರಾಮದ ಸನಂ 48ಬಿ. 49/1. 50ಎ. ವಿಸ್ತೀರ್ಣ 0-48. 1-30. 0-96. ಎಕ್ರೆ ಜಮೀನುಗಳನ್ನು ದಿನಾಂಕ 11-03-2016 ರ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರಾದ ಶೆಟ್ಟಿನಾಯ್ಕ ತಂದೆ ಲೇಟ್ ರಾಮನಾಯ್ಕ ದೂಪದಹಳ್ಳಿ ತಾಂಡ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲೂ ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 23-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಶೆಟ್ಟಿನಾಯ್ಕ ತಂದೆ ಲೇಟ್ ರಾಮನಾಯ್ಕ. ಕಮಲ್ಯನಾಯ್ಕ ತಂದೆ ಲೇಟ್ ಭೀಮಾನಾಯ್ಕ ದೂಪದಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಲಿಂಗನಾಯ್ಕ ತಂದೆ ಲೇಟ್ ರಾಮನಾಯ್ಕ. ರೇಡ್ಡಿನಾಯ್ಕ ತಂದೆ ಲೇಟ್ ರಾಮನಾಯ್ಕ ಹಾಗೂ ಇತರರು ದೂಪದಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.